ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1149 |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್. ಅರುಣ್ |
| ಉತ್ತರಿಸುವ ದಿನಾಂಕ | : | 28-12-2022. |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಬೆಂಗಳೂರಿನಿಂದ ತುಮಕೂರು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ಯಾವುವು; ಅದು ಎಷ್ಟು ಕಿ.ಮೀ ಇದೆ | ಬೆಂಗಳೂರಿನಿಂದ ತುಮಕೂರು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ-48ರ ಅಂತರವು 62 ಕಿ.ಮೀ. ಇರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಆ) | ಈ ಹೆದ್ದಾರಿಯನ್ನು ನಿರ್ಮಾಣ ಮಾಡಿ ನಿರ್ವಹಣೆ ಮಾಡುತ್ತಿರುವ ಸಂಸ್ಥೆ ಯಾವುದು; ಇದು ಮಾಡಿಕೊಂಡಿರುವ ಒಡಂಬಡಿಕೆ ಅನ್ವಯ ಇವರ ಅವಧಿ ಯಾವಾಗ ಮುಗಿದಿದೆ; (ವಿವರವಾದ ಮಾಹಿತಿ ನೀಡುವುದು) | • ಬೆಂಗಳೂರು-ನೆಲಮಂಗಲ ಹೆದ್ದಾರಿಯನ್ನು M/s.Navayuga Tollway Pvt. Ltd. ರವರು ನಿರ್ಮಿಸಿರುತ್ತಾರೆ. ಕರಾರು ಒಪ್ಪಂದದ ಪ್ರಕಾರ ರಿಯಾಯಿತಿ ಅವಧಿಯು 2027ರ ವರೆಗೆ ಇರುತ್ತದೆ. ರಿಯಾಯಿತಿದಾರರು, ಕರಾರಿನನ್ವಯ ಹೆದ್ದಾರಿ ನಿರ್ವಹಣೆ ಮಾಡದ ಕಾರಣ ದಿನಾಂಕ: 10.03.2021 ರಂದು ರಿಯಾಯಿತಿ ಗುತ್ತಿಗೆ ಕರಾರನ್ನು ರದ್ದುಗೊಳಿಸಿ ದಿನಾಂಕ: 21.02.2021ರಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವಹಿಸಿಕೊಂಡು ಟೋಲ್ ಶುಲ್ಕ ಸಂಗ್ರಹಣೆ ಮಾಡಲಾಗುತ್ತಿದೆ ಎಂದು ವರದಿಸಿರುತ್ತಾರೆ.<br>• ನೆಲಮಂಗಲ-ತುಮಕೂರು ವಿಭಾಗದ ಹೆದ್ದಾರಿಯನ್ನು M/s. JAS Tollway Pvt. Ltd ರವರಿಂದ ನಿರ್ಮಿಸಲಾಗಿದೆ. ಕರಾರು ಒಪ್ಪಂದದ ಪ್ರಕಾರ ಕಾರ್ಯಾಚರಣೆ ಮತ್ತು ನಿರ್ವಹಣೆಯ ಮುಕ್ತಾಯದ ದಿನಾಂಕವು 20.07.2021 ಆಗಿರುತ್ತದೆ. ಸದರಿ ಸಂಸ್ಥೆಯವರು ಮಧ್ಯಸ್ಥಿಕೆ ನ್ಯಾಯಮಂಡಳಿಯ (Arbitration Tribunal) ಮೊರೆ ಹೋಗಿದ್ದು, ಸ್ಥಳೀಯ ವೈಯಕ್ತಿಕ ಸಂಚಾರ (Local Personal Traffic) ಮತ್ತು ಸ್ಥಳೀಯ ವಾಣಿಜ್ಯ ಸಂಚಾರ (Local Commercial Traffic) ಸೋರಿಕೆಯಿಂದ ಮಧ್ಯಸ್ಥಿಕೆ ನ್ಯಾಯಮಂಡಳಿಯವರು ಸದರಿ ಸಂಸ್ಥೆಗೆ 479 ದಿನಗಳ ವಿಸ್ತರಣೆಯನ್ನು ನೀಡಿರುವುದರಿಂದ ನಿರ್ವಹಣಾ ದಿನಾಂಕ: 06.11.2022 ರಂದು ಪೂರ್ಣಗೊಂಡಿರುತ್ತದೆ. ನಂತರ ಚೊಕ್ಕೇನಹಳ್ಳಿ, ಕುಲುಮೇಪಾಳ್ಯ ಟೋಲ್ ಸಂಗ್ರಹ ಬಳಕೆದಾರರ ಶುಲ್ಕವನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ದಿನಾಂಕ: 07.11.2022 ರಂದು ವಹಿಸಿಕೊಂಡಿದ್ದು, ಟೋಲ್ ಶುಲ್ಕ ಸಂಗ್ರಹ ಏಜೆನ್ಸಿಯವರಾದ ಮೆ: ಶ್ರೀ ಸಾಯಿ ಎಂಟರ್ ಪ್ರೈಸಸ್ ರವರನ್ನು ಹೆದ್ದಾರಿ ನಿರ್ವಹಣೆಗಾಗಿ ನೇಮಿಸಲಾಗಿರುತ್ತದೆ ಹಾಗೂ ಟೋಲ್ ಶುಲ್ಕ ಸಂಗ್ರಹಿಸಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ಟೋಲ್ ಖಾತೆಗೆ ಜಮೆ ಮಾಡಲಾಗಿರುತ್ತದೆ ಎಂದು ವರದಿಸಿರುತ್ತಾರೆ. |

| | | |
|---|---|---|
| ಇ) | ಸದರಿ ರಸ್ತೆಯ ನಿರ್ವಹಣೆಯ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಅವಧಿಯು ಮುಗಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ರಸ್ತೆಯನ್ನು ಟೋಲ್ ಮುಕ್ತ ರಸ್ತೆಯನ್ನಾಗಿ ಮಾಡದೇ ಸಂಸ್ಥೆಯೇ ಟೋಲ್ ಶುಲ್ಕವನ್ನು ಸಂಗ್ರಹಿಸುತ್ತಿರುವುದು ನ್ಯಾಯ ಸಮ್ಮತವೇ; | • ಬೆಂಗಳೂರು – ನೆಲಮಂಗಲ ವಿಭಾಗದ ಕಿ.ಮೀ. 10.00 ರಿಂದ 29.50 ರವರೆಗೆ ಒಡಂಬಡಿಕೆ ಅವಧಿಯು ಮುಗಿದಿರುವುದಿಲ್ಲ. ರಿಯಾಯಿತಿದಾರರ ಒಪ್ಪಂದದ ಪ್ರಕಾರ ರಿಯಾಯಿತಿ ಅವಧಿಯು 2027ರ ವರೆಗೆ ಇರುತ್ತದೆ. ರಿಯಾಯಿತಿದಾರರು ಹೆದ್ದಾರಿಯನ್ನು ಕರಾರಿನನ್ವಯ ನಿರ್ವಹಿಸದ ಕಾರಣ ದಿನಾಂಕ: 10.02.2021ರಂದು ಕರಾರನ್ನು ರದ್ದುಗೊಳಿಸಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಯೋಜನೆಯನ್ನು ವಶಕ್ಕೆ ಪಡೆದಿದ್ದು, ಕರಾರು ಒಪ್ಪಂದದ ಪ್ರಕಾರ ರಿಯಾಯಿತಿ ಅವಧಿಯು 2027ರ ವರೆಗೆ ಇದ್ದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ವತಿಯಿಂದ ಮೆ: ರಿದ್ಧಿ ಸಿದ್ಧಿ ಅಸೋಸಿಯೇಟ್ಸ್ ರವರ ಮುಖಾಂತರ ಟೋಲ್ ಫೀ ಶುಲ್ಕವನ್ನು ಸಂಗ್ರಹಿಸಲಾಗುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.<br>• ನೆಲಮಂಗಲ – ತುಮಕೂರು ವಿಭಾಗಕ್ಕೆ ದಿನಾಂಕ: 06.11.2022ರವರೆಗೆ ಬಳಕೆಯ ಶುಲ್ಕದ ಸಂಗ್ರಹವನ್ನು M/s. JAS Tollway Pvt. Ltd ರವರು ಸಂಗ್ರಹಿಸಿರುತ್ತಾರೆ. ತದನಂತರದಲ್ಲಿ ಆರ್ಬಿಟ್ರೇಟರ್ ರವರ ಆದೇಶ ದಿನಾಂಕ:29.10.2022 ರಂತೆ ದಿನಾಂಕ: 07.11.2022ರಿಂದ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವಹಿಸಿಕೊಂಡಿರುತ್ತಾರೆ. ಮುಂದುವರೆದು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿ ಮಾಡಿರುವಂತೆ ರಿಯಾಯಿತಿದಾರರು, Demonetization, Covid-19, ಸ್ಥಳೀಯ ವಾಣಿಜ್ಯ ವಾಹನಗಳ ಸಂಚಾರಕ್ಕಾಗಿ ಅನುಮತಿ ನೀಡಿರುವ ಕಾರಣಗಳಿಂದಾಗಿ ಹೆಚ್ಚುವರಿಯಾಗಿ 257 ದಿನಗಳ ವಿಸ್ತರಣೆಯನ್ನು ಕೋರಿದ್ದು ಈ ಸಂಬಂಧ ಆರ್ಬಿಟ್ರೇಷನ್ ಪ್ರಕರಣದ ವಿಚಾರಣೆಯು ಪ್ರಗತಿಯಲ್ಲಿದ್ದು ಆರ್ಬಿಟ್ರೇಟರ್ ಆದೇಶ ಬಂದಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು M/s. JAS Tollway Pvt. Ltd ರವರಿಗೆ ಹೆಚ್ಚುವರಿ ಅವಧಿಯ ಟೋಲ್ ಶುಲ್ಕವನ್ನು ಮರುಪಾವತಿ ಮಾಡಬೇಕಾಗುತ್ತದೆ. ಇದಲ್ಲದೆ, M/s. JAS Tollway Pvt. Ltd ಕಂಪನಿಯವರಿಗೆ ಯೋಜನೆಯನ್ನು BOT (Grant) ಆಧಾರದಲ್ಲಿ ರೂ. 24.84 ಕೋಟಿಗಳ ಅನುದಾನದೊಂದಿಗೆ ವಹಿಸಲಾಗಿರುತ್ತದೆ. ಅಲ್ಲದೆ, ಸದರಿ ಯೋಜನೆಯಲ್ಲಿ ಭೂಸ್ವಾಧೀನ ವೆಚ್ಚ, Change of Scope & Consultancy Services ರವರುಗಳ ವೆಚ್ಚವು ಒಳಗೊಂಡಿರುತ್ತದೆ. ಈ ಬಂಡವಾಳ ಮೊತ್ತವು ಮರುಪಾವತಿ ಆಗುವವರೆಗೂ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ದಿನಾಂಕ: 07.11.2022ರಿಂದ ಟೋಲ್ ಶುಲ್ಕ ಸಂಗ್ರಹಿಸುವುದನ್ನು ಮುಂದುವರೆಸಿದ್ದು ಮೆ: ಶ್ರೀ ಸಾಯಿ ಎಂಟರ್ ಪ್ರೈಸಸ್ ರವರ ಮುಖಾಂತರ ಟೋಲ್ ಶುಲ್ಕ ಸಂಗ್ರಹಿಸಲಾಗುತ್ತಿದೆ. ನಂತರ ಪ್ರಸ್ತುತ ಇರುವ ಟೋಲ್ |

| | | |
|---|---|---|
| | | ಶುಲ್ಕದ ಮೇಲೆ ಶೇ.40ರಷ್ಟು ಶುಲ್ಕವನ್ನು ಕಡಿಮೆ ಮಾಡಲಾಗುವುದೆಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಈ) | ಒಂದು ದಿನಕ್ಕೆ ಸರಾಸರಿ ನೆಲಮಂಗಲ ಟೋಲ್ ಮತ್ತು ಕ್ಯಾತ್ಸಂದ್ರ ಟೋಲ್‌ನಲ್ಲಿ ಎಷ್ಟು ಶುಲ್ಕ ಸಂಗ್ರಹವಾಗುತ್ತಿದೆ? | • ಬೆಂಗಳೂರು – ನೆಲಮಂಗಲ ವಿಭಾಗದ ಟೋಲ್ ಪ್ಲಾಜಾದಲ್ಲಿ ಸರಾಸರಿ ದಿನ ಒಂದಕ್ಕೆ 26.30 ಲಕ್ಷ ಟೋಲ್ ಸಂಗ್ರಹವಾಗುತ್ತಿದ್ದು, ಮೊತ್ತವನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ಖಾತೆಗೆ ಜಮಾ ಮಾಡಲಾಗುತ್ತಿದೆ.<br>• ನೆಲಮಂಗಲ – ತುಮಕೂರು ವಿಭಾಗದ, ಟೋಲ್ ಶುಲ್ಕದ ಸಂಗ್ರಹ ಮೊತ್ತವನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೇಂದ್ರ ಸ್ಥಾನ, ನವದೆಹಲಿ ರವರ ಟೋಲ್ ಖಾತೆಗೆ ಜಮಾ ಮಾಡಲಾಗುತ್ತದೆ. ದಿನಾಂಕ: 07.11.2022 ರಿಂದ ಸರಾಸರಿ ಟೋಲ್ ಸಂಗ್ರಹಣೆ ಮೊತ್ತ ದಿನ ಒಂದಕ್ಕೆ ಮೊತ್ತ ರೂ. 26,28,999/– ಗಳು ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಎಂದು ವರದಿಸಿರುತ್ತಾರೆ. |

ಕಡತ ಸಂಖ್ಯೆ: ಲೋಇ 449 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು